**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

**ಕ್ರಿ.ಮೊ. ಸಂಖ್ಯೆ 36/2022**

ಪಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

-ವಿರುದ್ದ-

ಆರೋಪಿ/ತರುಃ

1) ಶಶಿಧರ ಬಿನ್ ಪುಟ್ಟೇಗೌಡ, 41 ವರ್ಷ, ವ್ಯವಸಾಯಗಾರರು, ವಾಸ ಃ ಕರಕುಚ್ಚಿ ಗ್ರಾಮ, ಲಕ್ಕವಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು

2) ಸುಧೀರ್ ಬಿನ್ ಶಶಿಧರ , 31 ವರ್ಷ, ಕೂಲಿಕೆಲಸ, ವಾಸ ಃ ದಿಂಡ ಗ್ರಾಮ, ಹಾನಗಲ್ ಅಂಚೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

********

ಆ ರೋ ಪ ಣೆ

ಲಕ್ಕವಳ್ಳಿ ಪೋಲೀಸ್ ಠಾಣಾ ಸರಹದ್ದಿನ ಕರಕುಚ್ಚಿ ಗ್ರಾಮದ 1 ನೇ ಆರೋಪಿಯಾದ ನೀವು ಅಡಿಕೆ ಕೆಲಸಕ್ಕಾಗಿ ವಿದ್ಯುತ್ ಕಂಪನಿಯ ಡಿಸೇಲ್ ಮೋಟಾರ್ ಜನರೇಟರನ್ನು ತಂದು ನಿಮ್ಮ ಮನೆಯ ಮುಂದಿನ ಅಡಿಕೆ ಶೆಡ್ ನಲ್ಲಿ ಇಟ್ಟುಕೊಂಡಿದ್ದು, 2 ನೇ ಆರೋಪಿಯಾದ ನೀವು 1 ನೇ ಆರೋಪಿಯಾದ ನಿಮ್ಮ ಮನೆಗೆ ಕೂಲಿ ಕೆಲಸ ಮಾಡಿಸಲೆಂದು ರಮೇಶ್ ರವರನ್ನು ಮತ್ತು ಸಾಕ್ಷಿ-10, 11 ಮತ್ತು 12 ರವರನ್ನು ತೀರ್ಥಹಳ್ಳಿ ತಾಲ್ಲೂಕಿನಿಂದ ಕರೆದುಕೊಂಡು ಬಂದು 1 ನೇ ಆರೋಪಿಯಾದ ನಿಮ್ಮ ಮನೆಗೆ ಬಿಟ್ಟಿದ್ದು, ದಿನಾಂಕ 23.09.2019 ರಂದು ಬೆಳಿಗ್ಗೆ 07.30 ಗಂಟೆ ಸಮಯದಲ್ಲಿ 1 ನೇ ಆರೋಪಿಯಾದ ನೀವು ರಮೇಶ್ ರವರಿಗೆ ಡಿಸೇಲ್ ಜನರೇಟರ್ ನಲ್ಲಿ ಕೆಲಸ ಮಾಡಲು ಹೇಳಿದ್ದು, 1 ನೇ ಆರೋಪಿಯಾದ ನೀವು ಮೆಸ್ಕಾಂ ಇಲಾಖೆಯಿಂದ ಯಾವುದೇ ಪರವಾನಗಿಯನ್ನು ಪಡೆಯದೆ ಅನಧೀಕೃತವಾಗಿ ಜನರೇಟರಿನಿಂದ ನೇರವಾಗಿ ವಿದ್ಯುತ್ ವೈಯರನ್ನು ವಿದ್ಯುತ್ ಬೋರ್ಡ್ ಗೆ ಕಲ್ಪಿಸಿಕೊಂಡಿದ್ದು, ವೈಯರ್ ಹಾಳಾಗಿದ್ದರಿಂದ ರಮೇಶ್ ರವರು ಡಿಸೇಲ್ ಮೋಟಾರ್ ಜನರೇಟರಿನಲ್ಲಿದ್ದ ವೈಯರನ್ನು ಮುಟ್ಟಿ ವಿದ್ಯುತ್

ಸ್ಪರ್ಶಗೊಂಡು ಮೃತಪಟ್ಟಿದ್ದು, 1 ನೇ ಆರೋಪಿಯಾದ ನೀವು ಯಾವುದೇ ಮುಂಜಾಗ್ರತಾ ಕ್ರಮವನ್ನು ಹಾಗೂ ಸಾಧನ ಸಲಕರಣೆಗಳನ್ನು ರಮೇಶ್ ರವರಿಗೆ ನೀಡದೆ ನಿರ್ಲಕ್ಷತನ ತೋರಿ ಮತ್ತು 2 ನೇ ಆರೋಪಿಯಾದ ನೀವು ಕೂಲಿ ಕೆಲಸಕ್ಕೆಂದು ಕರೆದುಕೊಂಡು ಬಂದು ನಿರ್ಲಕ್ಷ್ಯತನದಿಂದ ರಮೇಶ್ ರವರಿಂದ ಕೆಲಸ ಮಾಡಿಸಿದ್ದರಿಂದ ರಮೇಶ್ ರವರು ಮೃತಪಟ್ಟಿದ್ದು, ಆದ್ದರಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಪ್ರಶ್ನೆ 1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರಾ?
ಉತ್ತರಃ-
1 ನೇ ಆರೋಪಿ ಃ ಕೇಳಿದ್ದೇನೆ
2 ನೇ ಆರೋಪಿ ಃಕೇಳಿದ್ದೇನೆ

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ-
1 ನೇ ಆರೋಪಿ ಃ ವಿಚಾರಣೆಯಾಗಬೇಕು
2 ನೇ ಆರೋಪಿ ಃ ವಿಚಾರಣೆಯಾಗಬೇಕು

(ಮೇಲ್ಕಂಡ ಆಪಾದನೆಯನ್ನು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕಃ 09.02.2026

ಸಹಿ

(ಊರ್ಮಿಳ.ವಿ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.